ಈ ಕೆಳಕಂಡ ಸಂಕಲನ ಸಾರಗಳನ್ನು, ಡೇವಿಡ್ ಶಾಫರ್ ಅವರ ಸೋಶಿಯಲ್ ಅಂಡ್ ಪರ್ಸ್‌ನಾಲಿಟಿ ಡೆವಲಪ್ಮೆಂಟ್ (೨೦೦೯) ಹಾಗೂ ಜೊನಾಥನ್ ಟಡ್ಜ್, ಐರಿನ ಮೊಕ್ರೋವ, ಬ್ರಿಜೆಟ್ ಹಟ್‌ಫಿಎಲ್ಡ್ ಮತ್ತು ರಚನಾ ಕರ್ಣಿಕ್ ಅವರ ಯೂಸಸ್ ಅಂಡ್ ಮಿಸ್ಯೂಸಸ್ ಆಫ್ ಬ್ರೊನ್ಫೆನ್‌ಬ್ರೆನ್ನರ್'ಸ್ ಬಯೋಎಕಲಾಜಿಕಲ್ ಥಿಯರಿ ಆಫ್ ಹ್ಯೂಮನ್ ಡೆವಲಪ್ಮೆಂಟ್ (೨೦೦೯) ಪುಸ್ತಕದಿಂದ ತೆಗೆದುಕೊಳ್ಳಲಾಗಿದೆ.

## ಪಾರಿಸರಿಕ ವ್ಯವಸ್ಥೆಗಳ ಸಿದ್ಧಾಂತ

ಯೂರಿ ಬ್ರೊನ್ಫೆನ್‌ಬ್ರೆನ್ನರ್ ಅವರ (೧೯೭೯, ೧೯೮೯; ಬ್ರೊನ್ಫೆನ್‌ಬ್ರೆನ್ನರ್ ಮತ್ತು ಮೋರೀಸ್, ೨೦೦೬) ಪಾರಿಸರಿಕ ವ್ಯವಸ್ಥೆಗಳ ಸಿದ್ಧಾಂತವು ಪರಿಸರದ ಪ್ರಭಾವಗಳ ಕುರಿತು ಅತ್ಯಂತ ವಿವರವಾದ ವಿಶ್ಲೇಷಣೆಯನ್ನು ಒದಗಿಸುವ ಮಾನವ ವಿಕಾಸಕ್ಕೆ ಸಂಬಂಧಿಸಿದ ಇಲ್ಲಿಯವರೆಗಿನ ಪ್ರಕಟಣೆಗಳಲ್ಲೇ ಒಂದು ಉತ್ತೇಜಕ ಹೊಸ ನೋಟವೆನಿಸಿದೆ. ಒಬ್ಬ ವ್ಯಕ್ತಿಯ ಜೈವಿಕವಾಗಿ ಪ್ರಭಾವಿತಗೊಂಡ ಗುಣಲಕ್ಷಣಗಳು, ಪರಿಸರದ ಪ್ರಭಾವಗಳೊಂದಿಗಿನ ಪಾರಸ್ಪರಿಕ ಕ್ರಿಯೆಯಿಂದ ಅಭಿವೃದ್ಧಿಯನ್ನು ರೂಪಿಸುವುವು ಎಂಬುದನ್ನು ಸಹ ಇದು ಒಪ್ಪಿಕೊಳ್ಳುವ ಕಾರಣದಿಂದಾಗಿ, ಈ ದೃಷ್ಟಿಕೋನವನ್ನು ಜೈವಿಕ ಪಾರಿಸರಿಕ ಸಿದ್ಧಾಂತ ಎಂದು ವಿವರಿಸುವುದು ಪ್ರಾಯಶಃ ಹೆಚ್ಚು ನಿಖರವಾದುದು.

ಮೊದಲಿಗೆ ಬ್ರೊನ್ಫೆನ್‌ಬ್ರೆನ್ನರ್ ಅವರು, ನೈಸರ್ಗಿಕ ಪರಿಸರಗಳು ವ್ಯಕ್ತಿಗಳ ವಿಕಾಸವನ್ನು ಪ್ರಭಾವಿಸುವ ಪ್ರಮುಖ ಮೂಲವಾಗಿದ್ದು, ಅತ್ಯಂತ ಕೃತಕವಾದ ಪ್ರಯೋಗಾಲಯದ ಸನ್ನಿವೇಶದಲ್ಲಿ ವಿಕಾಸದ ಅಧ್ಯಯನವನ್ನು ಆಯ್ಕೆಮಾಡಿಕೊಂಡ ಸಂಶೋಧಕರು ಇದನ್ನು ಕಡೆಗಣಿಸುತ್ತಾರೆ (ಅಥವಾ ಸುಮ್ಮನೆ ನಿರ್ಲಕ್ಷಿಸುತ್ತಾರೆ) ಎಂದು ಪ್ರಾರಂಭಿಸುತ್ತಾರೆ. ನಂತರ ಅವರು ಮುಂದುವರಿದು, ಪರಿಸರವನ್ನು (ಅಥವಾ ನೈಸರ್ಗಿಕ ಪರಿಸರ ವಿಜ್ಞಾನವನ್ನು) ರಷ್ಯಾದ ಗೊಂಬೆಗಳ ಗುಂಪಿನಂತೆ, ಒಂದರೊಳಗೊಂದರಂತೆ ಅಡಕಿಸಿದ ರಚನೆಗಳ ಸಮುಚ್ಚಯವೆಂದು ವ್ಯಾಖ್ಯಾನಿಸುತ್ತಾರೆ (ಪು. ೨೨). ಬೇರೆ ಪದಗಳಲ್ಲಿ ಹೇಳುವುದಾದರೆ, ಅಭಿವೃದ್ಧಿ ಹೊಂದುತ್ತಿರುವ ವ್ಯಕ್ತಿಯು ಕುಟುಂಬದಂತಹ ಅತ್ಯಂತ ನಿಕಟ ಸನ್ನಿವೇಶಗಳಿಂದ ಹಿಡಿದು ಹೆಚ್ಚಿನ ವಿಸ್ತೃತ ಸಂಸ್ಕೃತಿಯಂತಹ, ಹೆಚ್ಚು ದೂರದ ಸನ್ನಿವೇಶಗಳವರೆಗೆ ಹಲವಾರು ಪಾರಿಸರಿಕ ವ್ಯವಸ್ಥೆಗಳ ಕೇಂದ್ರದಲ್ಲಿದ್ದಾನೆ ಮತ್ತು ಅವುಗಳಿಂದ ಆವರಿಸಲ್ಪಟ್ಟಿದ್ದಾನೆ ಎಂದು ಹೇಳಲಾಗುತ್ತದೆ (ಚಿತ್ರ ೩.೪ ನೋಡಿ). ಈ ಪ್ರತಿಯೊಂದು ವ್ಯವಸ್ಥೆಗಳೂ ಮತ್ತೊಂದರೊಡನೆ ಮತ್ತು ವ್ಯಕ್ತಿಯೊಡನೆ ಅಂತರಕ್ರಿಯೆ ನಡೆಸಿ ವಿಕಾಸವನ್ನು ಪ್ರಮುಖ ವಿಧಗಳಲ್ಲಿ ಪ್ರಭಾವಿಸುತ್ತವೆ ಎನ್ನಲಾಗುತ್ತದೆ.

೨೦೦೫ರಲ್ಲಿ ಬ್ರೊನ್ಫೆನ್‌ಬ್ರೆನ್ನರ್ ಅವರ ಮರಣದ ಮುಂಚಿನ ಅಂತಿಮ ವಿವರಗಳು ಇನ್ನೂ ಹೆಚ್ಚು ಅಭಿವೃದ್ಧಿಶೀಲ ಮತ್ತು ಅಂತರಕ್ರಿಯಾತ್ಮಕ ವೈಶಿಷ್ಟ್ಯವನ್ನು ಹೊಂದಿವೆ. ಆ ಸಂಪೂರ್ಣ ಸಿದ್ಧಾಂತವು ತನ್ನ ವಿಕಸಿತ ರೂಪದಲ್ಲಿ ಕೆಳಗಿನ ನಾಲ್ಕು "ಪಿ.ಪಿ.ಟಿ.ಸಿ" ಪರಿಕಲ್ಪನೆಗಳ ನಡುವಿನ ಪರಸ್ಪರ ಸಂಬಂಧಗಳನ್ನು ಕುರಿತದ್ದಾಗಿದೆ.

***ಪ್ರೋಸೆಸ್ (ಪ್ರಕ್ರಿಯೆ)***: ಇದರಲ್ಲಿನ ಮೊದಲ ಪರಿಕಲ್ಪನೆ ಅಭಿವೃದ್ಧಿಯಲ್ಲಿ ನಿರ್ಣಾಯಕ ಪಾತ್ರ ("ಪ್ರಾಥಮಿಕ ಕಾರ್ಯವಿಧಾನಗಳು") ವಹಿಸುತ್ತದೆ. ಬ್ರೊನ್ಫೆನ್‌ಬ್ರೆನ್ನರ್ ಅವರ ನಂತರದ ಅನೇಕ ಪ್ರಕಟಣೆಗಳಲ್ಲಿ ಕಾಣಿಸಿಕೊಳ್ಳುವ ಎರಡು "ಪ್ರಮುಖ ಹೇಳಿಕೆಗಳಲ್ಲಿ" ಸಮೀಪಸ್ಥ ಪ್ರಕ್ರಿಯೆಗಳು ಪ್ರಸ್ತಾಪಗೊಳ್ಳುತ್ತವೆ. ಅದರಲ್ಲಿ ಮೊದಲನೆಯದು ಹೀಗಿದೆ:

*...ಮಾನವ ವಿಕಾಸವು, ಸಕ್ರಿಯ ಜೈವಿಕ-ಮಾನಸಿಕ ಮಾನವ ಜೀವ ಮತ್ತು ಅದಕ್ಕೆ ನಿಕಟವಾದ ಬಾಹ್ಯ ಪರಿಸರದಲ್ಲಿನ ವ್ಯಕ್ತಿಗಳು, ವಸ್ತುಗಳು ಮತ್ತು ಚಿಹ್ನೆಗಳ ನಡುವಿನ ಹಂತಹಂತವಾದ ಹೆಚ್ಚು ಸಂಕೀರ್ಣ ಪಾರಸ್ಪರಿಕ ಕ್ರಿಯೆಗಳ ಮೂಲಕ ನಡೆಯುತ್ತದೆ. ಪರಸ್ಪರ ಕ್ರಿಯೆಯು ಪರಿಣಾಮಕಾರಿಯಾಗಲು ವಿಸ್ತೃತ ಅವಧಿಗಳಲ್ಲಿ ಸಾಕಷ್ಟು ನಿಯತವಾಗಿ ಸಂಭವಿಸಬೇಕು. ನಿಕಟ*

*ಪರಿಸರದಲ್ಲಿನ ಅಂತಹ ನಿರಂತರವಾದ ಪಾರಸ್ಪರಿಕ ಕ್ರಿಯೆಗಳನ್ನು "ಸಮೀಪಸ್ಥ ಪ್ರಕ್ರಿಯೆಗಳು" ಎಂದು ಕರೆಯಲಾಗುತ್ತದೆ. (ಬ್ರೊನ್ಫೆನ್‌ಬ್ರೆನ್ನರ್ ಮತ್ತು ಮೊರಿಸ್, ೧೯೯೮, ಪು. ೯೯೬, ಮೂಲದಲ್ಲಿ ಓರೆಅಕ್ಷರದಲ್ಲಿದೆ)*

ಅವರು ಒದಗಿಸಿರುವ ಉದಾಹರಣೆಗಳು ("ಚಿಕ್ಕ ಮಗುವಿನೊಂದಿಗೆ ಆಟವಾಡುವುದು; ಮಕ್ಕಳ ನಡುವಿನ ಚಟುವಟಿಕೆಗಳು; ಗುಂಪು ಅಥವಾ ಒಂಟಿ ಆಟ, ಓದುವುದು, ಹೊಸ ಕೌಶಲ್ಯಗಳನ್ನು ಕಲಿಯುವುದು" ಇತ್ಯಾದಿ), ಅಭಿವೃದ್ಧಿಶೀಲ ವ್ಯಕ್ತಿಗಳ ಜೀವನದಲ್ಲಿ ನಿಯತವಾಗಿ ನಡೆಯುವ ಕಾರ್ಯಗಳ ಪ್ರಕಾರಗಳಾಗಿವೆ. ಅವು ಅಭಿವೃದ್ಧಿಯ ಚಾಲಕಗಳಾಗಿವೆ. ಏಕೆಂದರೆ ಇಂತಹ ಚಟುವಟಿಕೆ ಮತ್ತು ಅಂತರಕ್ರಿಯೆಗಳಲ್ಲಿ ತೊಡಗುವುದರಿಂದ ವ್ಯಕ್ತಿಗಳು ತಮ್ಮ ಪ್ರಪಂಚವನ್ನು ಹಾಗೂ, ಅದರಲ್ಲಿನ ಅವರ ಸ್ಥಾನವನ್ನು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಅಸ್ತಿತ್ವದಲ್ಲಿರುವ ಕ್ರಮಕ್ಕೆ ಹೊಂದಿಕೊಳ್ಳುವಾಗ ಚಾಲ್ತಿಯಲ್ಲಿರುವ ಕ್ರಮವನ್ನು ಬದಲಾಯಿಸುವ ತಮ್ಮ ಎರಡೂ ಪಾತ್ರವನ್ನು ವಹಿಸುತ್ತಾರೆ. ಬಹುಶಃ ಬ್ರೊನ್ಫೆನ್‌ಬ್ರೆನ್ನರ್ ಅವರ ೧೯೭೯ರ ಪುಸ್ತಕದ ಆಧಾರದ ಮೇಲೆ, ಅವರನ್ನು ಸನ್ನಿವೇಶದ ಸಿದ್ಧಾಂತಿಯಾಗಿ ಉಲ್ಲೇಖಿಸಲ್ಪಡುವುದನ್ನು ಮುಂದುವರಿಸಲಾಗಿದೆ ಎಂಬ ಅಂಶಕ್ಕೆ ಪ್ರತಿಕ್ರಿಯಿಸುತ್ತಾ, ಬ್ರೊನ್ಫೆನ್‌ಬ್ರೆನ್ನರ್, ಸಮೀಪಸ್ಥ ಪ್ರಕ್ರಿಯೆಗಳು ಸಿದ್ಧಾಂತಕ್ಕೆ ಮೂಲಭೂತವಾಗಿವೆ ಎಂದು ಹೆಚ್ಚು ಸ್ಪಷ್ಟವಾಗಿ ಹೇಳುತ್ತಾರೆ.

***ಪರ್ಸನ್ (ವ್ಯಕ್ತಿ)***: ಬ್ರೊನ್ಫೆನ್‌ಬ್ರೆನ್ನರ್, ವ್ಯಕ್ತಿಯ ಜೈವಿಕ ಮತ್ತು ಆನುವಂಶಿಕ ಅಂಶಗಳ ಪ್ರಸ್ತುತತೆಯನ್ನು ಒಪ್ಪಿಕೊಂಡಿದ್ದಾರೆ (ಬ್ರೊನ್ಫೆನ್‌ಬ್ರೆನ್ನರ್, ೨೦೦೧/೨೦೦೫; ಬ್ರೊನ್ಫೆನ್‌ಬ್ರೆನ್ನರ್ ಮತ್ತು ಚೇಚಿ, ೧೯೯೪). ಆದಾಗ್ಯೂ, ಯಾವುದೇ ಸಾಮಾಜಿಕ ಪರಿಸ್ಥಿತಿಯಲ್ಲಿ ವ್ಯಕ್ತಿಗಳು ತಮ್ಮೊಂದಿಗೆ ತರುವ ವೈಯಕ್ತಿಕ ವಿಶಿಷ್ಟ ಗುಣಗಳಿಗೆ ಅವರು ಹೆಚ್ಚಿನ ಗಮನವನ್ನು ನೀಡಿದರು (ಬ್ರೊನ್ಫೆನ್‌ಬ್ರೆನ್ನರ್, ೧೯೯೩, ೧೯೯೫; ಬ್ರೊನ್ಫೆನ್‌ಬ್ರೆನ್ನರ್ ಮತ್ತು ಮೊರಿಸ್, ೧೯೯೮). ಅವರು ಈ ಗುಣಲಕ್ಷಣಗಳನ್ನು ಒತ್ತಾಯ (ಬೇಡಿಕೆ), ಸಂಪನ್ಮೂಲ ಮತ್ತು ಬಲ ಎಂದು ಮೂರು ವಿಧಗಳಾಗಿ ವಿಂಗಡಿಸಿದರು. ಅವರ ಹಿಂದಿನ ಬರಹಗಳಲ್ಲಿ "ವೈಯಕ್ತಿಕ ಗುಣಲಕ್ಷಣ"ಗಳೆಂದು ಉಲ್ಲೇಖಿಸಿದವುಗಳು ಒತ್ತಾಯದ ಗುಣಲಕ್ಷಣಗಳೆನಿಸಿವೆ. ಅಂದರೆ, ಇನ್ನೊಬ್ಬ ವ್ಯಕ್ತಿಗೆ ತಕ್ಷಣದ ಪ್ರಚೋದಕವಾಗಿ ವರ್ತಿಸುವ ವಯಸ್ಸು, ಲಿಂಗತ್ವ, ಚರ್ಮದ ಬಣ್ಣ ಮತ್ತು ದೈಹಿಕ ನೋಟಗಳು. ಈ ರೀತಿಯ ಗುಣಲಕ್ಷಣಗಳು ಶೀಘ್ರವಾಗಿ ರೂಪುಗೊಳ್ಳುವ ನಿರೀಕ್ಷೆಗಳಿಂದಾಗಿ, ಆರಂಭಿಕ ಅಂತರಕ್ರಿಯೆಗಳ ಮೇಲೆ ಪ್ರಭಾವ ಬೀರಬಹುದು. ಸಂಪನ್ಮೂಲ ಗುಣಲಕ್ಷಣಗಳು, ಇದಕ್ಕೆ ತದ್ವಿರುದ್ಧವಾಗಿ, ತಕ್ಷಣವೇ ಗೋಚರಿಸುವುದಿಲ್ಲ, ಆದರೂ ಕೆಲವೊಮ್ಮೆ ಅವುಗಳು, ಕಂಡುಬರುವ ಬೇಡಿಕೆಯ ಗುಣಲಕ್ಷಣಗಳಿಂದ ವಿಭಿನ್ನ ಮಟ್ಟದ ನಿಖರತೆಯೊಂದಿಗೆ ಪ್ರೇರೇಪಿಸಲ್ಪಡುತ್ತವೆ. ಇವುಗಳು ಮಾನಸಿಕ ಮತ್ತು ಭಾವನಾತ್ಮಕ ಸಂಪನ್ಮೂಲಗಳಾದ ಹಿಂದಿನ ಅನುಭವಗಳು, ಕೌಶಲ್ಯಗಳು ಮತ್ತು ಬುದ್ಧಿವಂತಿಕೆ, ಮತ್ತು ಸಾಮಾಜಿಕ ಮತ್ತು ಭೌತಿಕ ಸಂಪನ್ಮೂಲಗಳಿಗೆ (ಉತ್ತಮ ಆಹಾರ, ವಸತಿ, ಕಾಳಜಿಯುಳ್ಳ ಪೋಷಕರ ಸುಲಭಗಮ್ಯತೆ, ನಿರ್ದಿಷ್ಟ ಸಮಾಜದ ಅಗತ್ಯಗಳಿಗೆ ಸೂಕ್ತವಾದ ಶೈಕ್ಷಣಿಕ ಅವಕಾಶಗಳು ಇತ್ಯಾದಿ) ಭಾಗಶಃ ಸಂಬಂಧಿಸಿವೆ. ಅಂತಿಮವಾಗಿ, ಸ್ವಭಾವ, ಪ್ರೇರಣೆ, ನಿರಂತರತೆ ಮತ್ತು ಇಂತಹವುಗಳ ವ್ಯತ್ಯಾಸಗಳು ಬಲದ ಗುಣಲಕ್ಷಣಗಳೆನಿಸಿವೆ. ಬ್ರೊನ್ಫೆನ್‌ಬ್ರೆನ್ನರ್ ಪ್ರಕಾರ, ಇಬ್ಬರು ಮಕ್ಕಳು ಸಮಾನ ಸಂಪನ್ಮೂಲ ಗುಣಲಕ್ಷಣಗಳನ್ನು ಹೊಂದಿರಬಹುದು, ಆದರೆ ಒಬ್ಬರನ್ನು ಯಶಸ್ವಿಯಾಗಲು ಪ್ರೇರೇಪಿಸಿ, ಅವರು ಕಾರ್ಯಗಳಲ್ಲಿ ಮುಂದುವರಿದು, ಇನ್ನೊಬ್ಬರು ಪ್ರೇರೇಪಿಸಲ್ಪಡದಿದ್ದರೆ ಮತ್ತು ಮುಂದುವರಿಯದಿದ್ದರೆ ಅವರ ಬೆಳವಣಿಗೆಯ ಪಥಗಳು ಸಂಪೂರ್ಣವಾಗಿ ವಿಭಿನ್ನವಾಗಿರುತ್ತದೆ. ಕೆಲವು ಲೇಖಕರು ಸೂಚಿಸುವಂತೆ, ಬ್ರೊನ್ಫೆನ್‌ಬ್ರೆನ್ನರ್ ಅವರು ತಮ್ಮ ಆರಂಭಿಕ ಬರಹಗಳಲ್ಲೂ ಕೂಡಾ ಕೇವಲ ವಿಕಾಸದ ಮೇಲಿನ ಪ್ರಾಸಂಗಿಕ ಪ್ರಭಾವಗಳನ್ನು ಕುರಿತ ಸಿದ್ಧಾಂತಿಯಾಗಿರಲಿಲ್ಲ. ಬ್ರೊನ್ಫೆನ್‌ಬ್ರೆನ್ನರ್ ನಂತರದ ತಮ್ಮ ಬರಹಗಳಲ್ಲಿ, ಸಂದರ್ಭದ ಮಾರ್ಪಾಟಿನಲ್ಲಿ ವ್ಯಕ್ತಿಗಳ ಪಾತ್ರಗಳ ಸ್ಪಷ್ಟ ವೀಕ್ಷಣೆಯನ್ನು ನೀಡಿದ್ದಾರೆ. ಬದಲಾವಣೆಯು ತುಲನಾತ್ಮಕವಾಗಿ ನಿಷ್ಕ್ರಿಯವಾಗಿರಬಹುದು, (ವಯಸ್ಸು, ಲಿಂಗ ಮತ್ತು ಚರ್ಮದ ಬಣ್ಣ ಮುಂತಾದ ಬೇಡಿಕೆಯ ಗುಣಲಕ್ಷಣಗಳ ಆಧಾರದ ಮೇಲೆ ಇತರರು ಅವನಿಗೆ ಅಥವಾ ಅವಳಿಗೆ ವಿಭಿನ್ನವಾಗಿ ಪ್ರತಿಕ್ರಿಯಿಸುವ ಮಟ್ಟಿಗೆ ಒಬ್ಬ ವ್ಯಕ್ತಿಯು ಪರಿಸರವನ್ನು ಕೇವಲ ಅದರಲ್ಲಿನ ತನ್ನ ಉಪಸ್ಥಿತಿಯ ಮೂಲಕ ಬದಲಾಯಿಸುತ್ತಾನೆ) ಹೆಚ್ಚು ಸಕ್ರಿಯವಾಗಿರಬಹುದು, (ವ್ಯಕ್ತಿಯು ಪರಿಸರವನ್ನು ಬದಲಾಯಿಸುವ ವಿಧಾನಗಳು ಅವನ ಅಥವಾ ಅವಳ ಸಂಪನ್ಮೂಲ ಗುಣಲಕ್ಷಣಗಳೊಂದಿಗೆ ಸಂಬಂಧ

ಹೊಂದಿವೆ, ಅದು ದೈಹಿಕ, ಮಾನಸಿಕ ಅಥವಾ ಭಾವನಾತ್ಮಕವಾಗಿರಬಹುದು) ಅತ್ಯಂತ ಸಕ್ರಿಯವಾಗಿರಬಹುದು (ವ್ಯಕ್ತಿಯು ಪರಿಸರವನ್ನು ಬದಲಾಯಿಸುವ ಪ್ರಮಾಣವು, ಭಾಗಶಃ, ಹಾಗೆ ಮಾಡುವ ಬಯಕೆ ಮತ್ತು ಪ್ರೇರಣೆ ಅಥವಾ ಒತ್ತಾಯದ ಗುಣಲಕ್ಷಣಗಳಿಗೆ ಸಂಬಂಧಿಸಿದೆ).

*ಕಾಂಟೆಕ್ಸ್ಟ್ (ಸನ್ನಿವೇಶ/ಸಂದರ್ಭ)*: ಪರಿಸರ, ಅಥವಾ ಸನ್ನಿವೇಶ, ನಾಲ್ಕು ಪರಸ್ಪರ ಸಂಬಂಧಿತ ವ್ಯವಸ್ಥೆಗಳನ್ನು ಒಳಗೊಂಡಿರುತ್ತದೆ. ಮೊದಲನೆಯದು, ಅಭಿವೃದ್ಧಿಶೀಲ ವ್ಯಕ್ತಿಯು ಚಟುವಟಿಕೆಗಳು ಮತ್ತು ಅಂತರಕ್ರಿಯೆಗಳಲ್ಲಿ (ಅಂದರೆ, ಸೂಕ್ಷ್ಮವ್ಯವಸ್ಥೆ - ಮೈಕ್ರೋಸಿಸ್ಟಮ್) ತೊಡಗಿಸಿಕೊಳ್ಳಲು ಉತ್ತಮ ಸಮಯವನ್ನು ಕಳೆಯುವ ಮನೆ, ಶಾಲೆ, ಸಮವಯಸ್ಕರ ಗುಂಪಿನಂತಹ ಯಾವುದೇ ಪರಿಸರವಾಗಬಹುದು. ಜನರು ಒಂದಕ್ಕಿಂತ ಹೆಚ್ಚು ಸೂಕ್ಷ್ಮವ್ಯವಸ್ಥೆಯಲ್ಲಿ ಸಮಯವನ್ನು ಕಳೆಯುವ ನಿಟ್ಟಿನಲ್ಲಿ, ಅವರ ನಡುವಿನ ಪರಸ್ಪರ ಸಂಬಂಧಗಳ ಬಗ್ಗೆ ಬ್ರೊನ್ಫೆನ್‌ಬ್ರೆನ್ನರ್ ಬರೆದಿದ್ದಾರೆ (ಅಂದರೆ, ಮಾಧ್ಯಮಿಕವ್ಯವಸ್ಥೆ - ಮೆಸೊಸಿಸ್ಟಮ್). ನಾವು ಗಮನಿಸುತ್ತಿರುವ ವ್ಯಕ್ತಿಗಳು ಆ ಸನ್ನಿವೇಶದಲ್ಲಿ ಉಪಸ್ಥಿತರಿಲ್ಲದಾಗ್ಯೂ, ಆ ವ್ಯಕ್ತಿಯ ವಿಕಾಸಕ್ಕೆ ಪರೋಕ್ಷ ಪ್ರಭಾವಗಳನ್ನು ಬೀರುವ ಪ್ರಮುಖ ಸನ್ನಿವೇಶಗಳೂ ಇವೆ (ಅಂದರೆ, ಬಾಹ್ಯವ್ಯವಸ್ಥೆ - ಎಕ್ಸೋಸಿಸ್ಟಮ್). ಬಾಹ್ಯವ್ಯವಸ್ಥೆಯ ಪರಿಣಾಮದ ಒಂದು ಉದಾಹರಣೆ ಹೀಗಿದೆ: ತಾಯಿಯು ನಿರ್ದಿಷ್ಟವಾಗಿ, ಕೆಲಸದ ಕಾರಣದಿಂದಾಗಿ ಒತ್ತಡಕ್ಕೊಳಗಾಗಿದ್ದಾಳೆ ಮತ್ತು ಇದರ ಪರಿಣಾಮವಾಗಿ ಅವಳು ಮನೆಗೆ ಬಂದಾಗ ತನ್ನ ಮಗನೊಂದಿಗೆ ವಾಡಿಕೆಗಿಂತ ಹೆಚ್ಚು ಮುಂಗೋಪದ ವರ್ತನೆಯನ್ನು ತೋರುತ್ತಾಳೆ. ತಾಯಿಯ ಕೆಲಸವು ಮಕ್ಕಳ ಬಾಹ್ಯವ್ಯವಸ್ಥೆಯೆನಿಸಿದೆ. ಮಕ್ಕಳು ಆ ಕೆಲಸದಲ್ಲಿ ಸಮಯ ಕಳೆಯದಿದ್ದರೂ, ಅದು ಅವರ ಮೇಲೆ ಪರೋಕ್ಷ ಪ್ರಭಾವವನ್ನು ಬೀರುತ್ತದೆ. ಅಂತಿಮವಾಗಿ, ಮೌಲ್ಯ ಅಥವಾ ನಂಬಿಕೆ ವ್ಯವಸ್ಥೆಗಳು, "ಸಂಪನ್ಮೂಲಗಳು, ಅಪಾಯಗಳು, ಜೀವನಶೈಲಿಗಳು, ಅವಕಾಶದ ಸ್ವರೂಪಗಳು, ಜೀವನ ಪಥದ ಆಯ್ಕೆಗಳು ಮತ್ತು ಸಾಮಾಜಿಕ ವಿನಿಮಯದ ಮಾದರಿ"ಗಳಲ್ಲಿ ಸಹಭಾಜಿತರಾದ ಸದಸ್ಯರ ಯಾವುದೇ ಗುಂಪನ್ನು ("ಸಂಸ್ಕೃತಿ, ಉಪಸಂಸ್ಕೃತಿ, ಅಥವಾ ಇತರ ವಿಸ್ತೃತ ಸಾಮಾಜಿಕ ರಚನೆ") ಒಳಗೊಳ್ಳುವ ಸಂದರ್ಭ ಎಂಬುದಾಗಿ, ಬೃಹತ್‌ವ್ಯವಸ್ಥೆಯನ್ನು, ಬ್ರೊನ್ಫೆನ್‌ಬ್ರೆನ್ನರ್ ವ್ಯಾಖ್ಯಾನಿಸಿದ್ದಾರೆ (೧೯೯೩, ಪು. ೨೫). ಬೃಹತ್‌ವ್ಯವಸ್ಥೆಯು ಉಳಿದ ವ್ಯವಸ್ಥೆಗಳನ್ನು ಆವರಿಸುತ್ತದೆ, ಅವುಗಳೆಲ್ಲವನ್ನೂ ಪ್ರಭಾವಿಸುತ್ತದೆ (ಮತ್ತು ಅವೆಲ್ಲರಿಂದ ಪ್ರಭಾವಿತವಾಗಿರುತ್ತದೆ). ಒಂದು ನಿರ್ದಿಷ್ಟ ಸಾಂಸ್ಕೃತಿಕ ಗುಂಪು ಮೌಲ್ಯಗಳ ಸಮುಚ್ಚಯವೊಂದನ್ನು ಹಂಚಿಕೊಳ್ಳಬಹುದು ಆದರೆ ಯಾವುದೇ ನಿರ್ದಿಷ್ಟ ಮೌಲ್ಯ ವ್ಯವಸ್ಥೆಯು ಅಭಿವೃದ್ಧಿ ಹೊಂದುತ್ತಿರುವ ವ್ಯಕ್ತಿಯ ಮೇಲೆ ಯಾವುದೇ ಪ್ರಭಾವ ಬೀರಲು ಆ ವ್ಯಕ್ತಿಯು ನೆಲೆಗೊಂಡಿರುವ ಒಂದು ಅಥವಾ ಹೆಚ್ಚಿನ ಸೂಕ್ಷ್ಮವ್ಯವಸ್ಥೆಗಳಲ್ಲಿ ಅದನ್ನು ಅನುಭವಿಸಬೇಕಾಗುತ್ತದೆ.

## ವಿಕಾಸಕ್ಕೆ ಸನ್ನಿವೇಶಗಳು (ಒಂದು ವಿಸ್ತೃತ ವಿವರಣೆ)

**ಸೂಕ್ಷ್ಮವ್ಯವಸ್ಥೆ:** ಬ್ರೊನ್ಫೆನ್‌ಬ್ರೆನ್ನರ್ ಅವರ ಅತ್ಯಂತ ಆಂತರಿಕ ಪಾರಿಸರಿಕ ಸ್ತರ ಅಥವಾ ಸೂಕ್ಷ್ಮವ್ಯವಸ್ಥೆಯು, ವ್ಯಕ್ತಿಯ ಸುತ್ತಲಿನ ತಕ್ಷಣದ ಚಟುವಟಿಕೆ ಮತ್ತು ಅಂತರಕ್ರಿಯೆಗಳನ್ನು ಸೂಚಿಸುತ್ತದೆ. ಹೆಚ್ಚಿನ ಶಿಶುಗಳಿಗೆ, ಸೂಕ್ಷ್ಮವ್ಯವಸ್ಥೆಯು ಕುಟುಂಬಕ್ಕೆ ಸೀಮಿತವಾಗಿರಬಹುದು. ಆದರೂ ನೈಸರ್ಗಿಕ ಪರಿಸರವು ಅಂತಿಮವಾಗಿ ಹೆಚ್ಚು ಸಂಕೀರ್ಣವಾಗುತ್ತದೆ. ಏಕೆಂದರೆ ಮಕ್ಕಳು ತಮ್ಮ ಹಗಲು ಪಾಲನೆಯ ಕೇಂದ್ರಗಳು, ಶಾಲಾಪೂರ್ವ ತರಗತಿಗಳು, ಯುವ ಗುಂಪುಗಳು ಮತ್ತು ನೆರೆಹೊರೆಯ ಆಟದ ಪ್ರದೇಶಗಳಲ್ಲಿನ ಸಮವಯಸ್ಕರಂತಹ ಇತರ ಸೂಕ್ಷ್ಮವ್ಯವಸ್ಥೆಗಳಿಗೆ ಒಡ್ಡಿಕೊಳ್ಳುತ್ತಾರೆ. ಮಕ್ಕಳು ತಮ್ಮ ಸೂಕ್ಷ್ಮವ್ಯವಸ್ಥೆಗಳಲ್ಲಿನ ಜನರಿಂದ ಮಾತ್ರ ಪ್ರಭಾವಿತರಾಗದೆ, ತಮ್ಮದೇ ಆದ ಜೈವಿಕವಾಗಿ ಮತ್ತು ಸಾಮಾಜಿಕವಾಗಿ ಪ್ರಭಾವಿತಗೊಂಡ ಗುಣಲಕ್ಷಣಗಳಿಂದ ಅಂದರೆ, ಅವರ ಅಭ್ಯಾಸಗಳು, ಮನೋಧರ್ಮಗಳು, ದೈಹಿಕ ಗುಣಲಕ್ಷಣಗಳು, ಮತ್ತು ಸಾಮರ್ಥ್ಯಗಳಿಂದ ಪ್ರಭಾವಿತರಾಗುತ್ತಾರೆ, ಹಾಗು ಸಹಚರರ ವರ್ತನೆಯ ಮೇಲೂ ಇವು ಪ್ರಭಾವ ಬೀರುತ್ತವೆ. ಉದಾಹರಣೆಗೆ, ಅತಿಸಂವೇದನಾಶೀಲ ಅಥವಾ ಕಷ್ಟಕರ ಜಾಯಮಾನದ ಶಿಶು ತನ್ನ ಹೆತ್ತವರನ್ನೇ ವಿಮುಖಗೊಳಿಸಬಹುದು ಅಥವಾ ಅವರ ವೈವಾಹಿಕ ಸಂಬಂಧವನ್ನು ಕೆಡಿಸುವಷ್ಟು ಅವರಿಬ್ಬರ ಮಧ್ಯೆ ಘರ್ಷಣೆ ಹುಟ್ಟಿಸಬಹುದು (ಬೆಲ್‌ಸ್ಕಿ, ರೋಸೆನ್‌ಬರ್ಗರ್ , ಮತ್ತು ಸರ್ನಿಕ್, ೧೯೯೫). ಮತ್ತು ಸೂಕ್ಷ್ಮವ್ಯವಸ್ಥೆಯಲ್ಲಿನ ಯಾವುದೇ ಇಬ್ಬರು ವ್ಯಕ್ತಿಗಳ ನಡುವಿನ ಪರಸ್ಪರ ಕ್ರಿಯೆಗಳು ಮೂರನೇ

ವ್ಯಕ್ತಿಗಳಿಂದ ಪ್ರಭಾವಿತವಾಗಿರಬಹುದು. ಉದಾಹರಣೆಗೆ, ತಂದೆಯರು ತಾಯಿ/ಶಿಶುವಿನ ಪರಸ್ಪರ ಕ್ರಿಯೆಗಳನ್ನು ಸ್ಪಷ್ಟವಾಗಿ ಪ್ರಭಾವಿಸುತ್ತಾರೆ: ತಮ್ಮ ಸಂಗಾತಿಗಳೊಂದಿಗೆ ನಿಕಟ ಬೆಂಬಲಯುತ ಸಂಬಂಧವನ್ನು ಹೊಂದಿದ್ದು, ಸಂತೋಷದ ವೈವಾಹಿಕ ಜೀವನವುಳ್ಳ ತಾಯಂದಿರು, ವೈವಾಹಿಕ ಒತ್ತಡವನ್ನು ಅನುಭವಿಸುವ, ತಮ್ಮ ಸಂಗಾತಿಯಿಂದ ಕಡಿಮೆ ಬೆಂಬಲವನ್ನು ಪಡೆಯುವ ಮತ್ತು ತಮ್ಮ ಮಕ್ಕಳನ್ನು ತಾವೇ ಬೆಳೆಸುತ್ತಿದ್ದೇವೆಂದು ಭಾವಿಸುವ ತಾಯಂದಿರಿಗಿಂತ ತಮ್ಮ ಶಿಶುಗಳೊಂದಿಗೆ ಹೆಚ್ಚು ತಾಳ್ಮೆಯಿಂದ ಮತ್ತು ಸಂವೇದನಾಶೀಲತೆಯಿಂದ ಪಾರಸ್ಪರಿಕ ಕಾರ್ಯಗಳನ್ನು ನಡೆಸುತ್ತಾರೆ, (ಕಾಕ್ಸ್ ಮತ್ತು ಇತರರು, ೧೯೮೯, ೧೯೯೨). ಆದ್ದರಿಂದ ಸೂಕ್ಷ್ಮವ್ಯವಸ್ಥೆಗಳು ಅಭಿವೃದ್ಧಿಗೆ ನಿಜವಾಗಿಯೂ ಕ್ರಿಯಾತ್ಮಕ ಸಂದರ್ಭಗಳಾಗಿವೆ, ಇದರಲ್ಲಿ ಪ್ರತಿಯೊಬ್ಬ ವ್ಯಕ್ತಿಯು ವ್ಯವಸ್ಥೆಯಲ್ಲಿನ ಎಲ್ಲಾ ಇತರ ವ್ಯಕ್ತಿಗಳಿಂದ ಪ್ರಭಾವಿತನಾಗಿರುತ್ತಾನೆ ಮತ್ತು ಅವರನ್ನು ಪ್ರಭಾವಿಸುತ್ತಾನೆ.

**ಮಾಧ್ಯಮಿಕವ್ಯವಸ್ಥೆ:** ಬ್ರೊನ್ಫೆನ್‌ಬ್ರೆನ್ನರ್ ಅವರ ಎರಡನೇ ಪರಿಸರ ಪದರಗಳು ಅಥವಾ ಮಾಧ್ಯಮಿಕವ್ಯವಸ್ಥೆಯು, ಮನೆಗಳು, ಶಾಲೆಗಳು ಮತ್ತು ಸಮಯವಸ್ಕರ ಗುಂಪುಗಳಂತಹ ಸೂಕ್ಷ್ಮವ್ಯವಸ್ಥೆಗಳ ನಡುವಿನ ಸಂಪರ್ಕಗಳು ಅಥವಾ ಪರಸ್ಪರ ಸಂಬಂಧಗಳನ್ನು ಸೂಚಿಸುತ್ತದೆ. ಸೂಕ್ಷ್ಮವ್ಯವಸ್ಥೆಗಳ ನಡುವಿನ ಸಶಕ್ತ ಹಾಗೂ ಬೆಂಬಲಯುತ ಸಂಪರ್ಕಗಳಿಂದ ಅಭಿವೃದ್ಧಿಯನ್ನು ಅತ್ಯುತ್ತಮಗೊಳಿಸುವ ಸಾಧ್ಯತೆಯಿದೆ ಎಂದು ಬ್ರೊನ್ಫೆನ್ಬ್ರೆನ್ನರ್ ನಂಬುತ್ತಾರೆ. ಉದಾಹರಣೆಗೆ, ಪೋಷಕರೊಂದಿಗೆ ಸುರಕ್ಷಿತ ಮತ್ತು ಸಾಮರಸ್ಯದ ಸಂಬಂಧಗಳನ್ನು ಸ್ಥಾಪಿಸಿದ ಯುವಜನತೆ ಸಾಮಾಜಿಕವಾಗಿ ಸಮರ್ಥರೆನಿಸಲು ಒಲವು ತೋರುತ್ತಾರೆ, ಗೆಳೆಯರಿಂದ ಸ್ವೀಕರಿಸಲ್ಪಡುತ್ತಾರೆ ಮತ್ತು ಬಾಲ್ಯ ಮತ್ತು ಹದಿಹರೆಯದ ಸಮಯದಲ್ಲಿ ನಿಕಟ, ಬೆಂಬಲಿತ ಸ್ನೇಹವನ್ನು ಆನಂದಿಸುತ್ತಾರೆ (ಗಾವಿನ್ ಮತ್ತು ಫರ್ಮ್ಯಾನ್, ೧೯೯೬; ಕರ್ನ್ಸ್, ಕ್ಲೆಪಿಕ್, ಮತ್ತು ಕೋಲ್, ೧೯೯೬; NICHD ಅರ್ಲಿ ಚೈಲ್ಡ್ ಕೇರ್ ರಿಸರ್ಚ್ ನೆಟ್ವರ್ಕ್, ೨೦೦೬; ಶುಲ್ಮ್ಯಾನ್, ಎಲಿಕೆರ್, ಮತ್ತು ಸ್ರೋಉಫ್, ೧೯೯೪). ಶಾಲೆಯಲ್ಲಿ ಪಾಠಗಳನ್ನು ಕರಗತ ಮಾಡಿಕೊಳ್ಳುವ ಮಗುವಿನ ಸಾಮರ್ಥ್ಯವು ಅವರ ಶಿಕ್ಷಕರು ಒದಗಿಸುವ ಬೋಧನೆಯ ಗುಣಮಟ್ಟವನ್ನು ಮಾತ್ರವಲ್ಲದೆ ಪೋಷಕರು ಈ ಶೈಕ್ಷಣಿಕ ಚಟುವಟಿಕೆಗಳಿಗೆ ಎಷ್ಟರಮಟ್ಟಿಗೆ ಮಹತ್ತ್ವವನ್ನು ನೀಡುತ್ತಾರೆಂಬುದನ್ನು ಮತ್ತು ಶಿಕ್ಷಕರೊಂದಿಗಿನ ಅವರ ಸಮಾಲೋಚನೆ ಅಥವಾ ಸಹಕಾರವನ್ನು ಅವಲಂಬಿಸಿರುತ್ತದೆ (ಲ್ಯೂಸ್ಟರ್ ಹಾಗು ಮಚಾಡೋ, ೧೯೯೬; ಸ್ಕಿಹುಲ್ಟಿಂಗ್, ಮೆಳೊನ್, ಹಾಗು ಡಾಡ್ಜ್, ೨೦೦೫). ಮತ್ತೊಂದೆಡೆ, ಸೂಕ್ಷ್ಮವ್ಯವಸ್ಥೆಗಳ ನಡುವಿನ ಬೆಂಬಲವಿಲ್ಲದ ಸಂಪರ್ಕಗಳು ತೊಂದರೆಯನ್ನು ಉಂಟುಮಾಡಬಹುದು. ಉದಾಹರಣೆಗೆ, ಸಮವಯಸ್ಕರ ಗುಂಪುಗಳು ಶಿಕ್ಷಣತಜ್ಞರಿಗೆ ಅಗೌರವವನ್ನು ತೋರಿದಾಗ, ಶೈಕ್ಷಣಿಕ ಸಾಧನೆಯನ್ನು ಪ್ರೋತ್ಸಾಹಿಸುವ ನಿಟ್ಟಿನ ಪೋಷಕರ ಮತ್ತು ಶಿಕ್ಷಕರ ಅತ್ಯುತ್ತಮ ಪ್ರಯತ್ನಗಳ ಹೊರತಾಗಿಯೂ ಅವರು ಆಗಾಗ್ಗೆ ಹದಿಹರೆಯದವರ ಪಾಂಡಿತ್ಯಪೂರ್ಣ ನಿರ್ವಹಣೆಯನ್ನು ಹಾಳುಗೆಡವುತ್ತಾರೆ (ಚೆನ್ ಮತ್ತು ಇತರರು, ೨೦೦೫; ಸ್ಟೈನ್ಬರ್ಗ್, ಡರ್ನ್‌ನ್ಬುಶ್, ಮತ್ತು ಬ್ರೌನ್, ೧೯೯೨).

**ಬಾಹ್ಯವ್ಯವಸ್ಥೆ:** ಬ್ರೋನ್ಫೆನ್ಬ್ರೆನ್ನರ್ ಅವರ ಮೂರನೇ ಪರಿಸರ ಪದರ ಅಥವಾ ಬಾಹ್ಯವ್ಯವಸ್ಥೆಯು ಮಕ್ಕಳು ಮತ್ತು ಹದಿಹರೆಯದವರು ಅವರ ಬೆಳವಣಿಗೆಯ ಮೇಲೆ ಪ್ರಭಾವ ಬೀರುವ ಸಂದರ್ಭಗಳ ಭಾಗವಾಗಿಲ್ಲದಾಗ್ಯೂ, ಅದು ಅವರನ್ನು ಪ್ರಭಾವಿಸುವ ವಿಷಯವನ್ನೊಳಗೊಂಡಿದೆ. ಉದಾಹರಣೆಗೆ, ಪೋಷಕರ ಕೆಲಸದ ವಾತಾವರಣವು ಬಾಹ್ಯವ್ಯವಸ್ಥೆಯ ಪ್ರಭಾವವಾಗಿದೆ, ಮತ್ತು ಮಕ್ಕಳ ಪೋಷಕರು ನಿಯತವಾಗಿ ಕೆಲಸ ಮಾಡುತ್ತಾರೆಯೇ (ಹ್ಸುಹ್ ಮತ್ತು ಯೋಶಿಕಾವಾ, ೨೦೦೭) ಮತ್ತು ಅವರ ಕೆಲಸವನ್ನು ಆನಂದಿಸುತ್ತಾರೆಯೇ (ಗ್ರೀನ್ಬರ್ಗರ್, ಒನೆಲ್, ಮತ್ತು ನಗೆಲ್, ೧೯೯೪) ಎಂಬ ವಿಷಯಗಳು ಮನೆಯಲ್ಲಿ, ಶಾಲೆಯಲ್ಲಿ ಮಕ್ಕಳ ಭಾವನಾತ್ಮಕ ಸಂಬಂಧಗಳನ್ನು ಗಣನೀಯವಾಗಿ ಪ್ರಭಾವಿಸಬಹುದು. ಅಂತೆಯೇ, ಶಾಲಾ ಮಂಡಳಿಯು ಅಳವಡಿಸಿಕೊಂಡ ಸಾಮಾಜಿಕ ಸಮನ್ವಯ ಯೋಜನೆಯಿಂದ, ಅಥವಾ ಅವರ ಸಮುದಾಯದಲ್ಲಿ ಸ್ಥಾವರವೊಂದನ್ನು ಮುಚ್ಚುವುದರಿಂದ ಶಾಲೆಗಳ ಆದಾಯದಲ್ಲಿ ಉಂಟಾಗುವ ಕುಸಿತದಿಂದ, ಶಾಲೆಯಲ್ಲಿ ಮಕ್ಕಳ ಅನುಭವಗಳು ಅವರ ಬಾಹ್ಯವ್ಯವಸ್ಥೆಯಿಂದ ಪ್ರಭಾವಿತವಾಗಲೂಬಹುದು.

**ಬೃಹತ್‌ವ್ಯವಸ್ಥೆ:** ಬೃಹತ್‌ವ್ಯವಸ್ಥೆಯಲ್ಲಿ ಅಭಿವೃದ್ಧಿ ಸಂಭವಿಸುತ್ತದೆ ಎಂದು ಬ್ರೋನ್ಫೆನ್ಬ್ರೆನ್ನರ್ ಒತ್ತಿಹೇಳುತ್ತಾರೆ, ಅಂದರೆ, ಸೂಕ್ಷ್ಮ, ಮಧ್ಯಮ ಮತ್ತು ಬಾಹ್ಯವ್ಯವಸ್ಥೆಗಳು ಅಂತರ್ಗತವಾಗಿರುವ ಸಾಂಸ್ಕೃತಿಕ, ಅಥವಾ ಉಪಸಾಂಸ್ಕೃತಿಕ ಅಥವಾ ಸಾಮಾಜಿಕ ವರ್ಗದ ಸಂದರ್ಭ. ಬೃಹತ್‌ವ್ಯವಸ್ಥೆಯು ನಿಜವಾಗಿಯೂ ವಿಶಾಲವಾದ, ವ್ಯಾಪಕವಾದ ಸಿದ್ಧಾಂತವಾಗಿದ್ದು (ಇತರ ವಿಷಯಗಳೊಂದಿಗೆ) ಅದು ಮಕ್ಕಳನ್ನು ಹೇಗೆ ನಡೆಸಿಕೊಳ್ಳಬೇಕು, ಅವರಿಗೆ ಏನು ಕಲಿಸಬೇಕು ಎಂಬುದನ್ನು ಮತ್ತು ಅವರು ಶ್ರಮಿಸಬೇಕಾದ ಗುರಿಗಳನ್ನು ಆದೇಶಿಸುತ್ತದೆ. ಸಹಜವಾಗಿ, ಈ ಮೌಲ್ಯಗಳು ಸಂಸ್ಕೃತಿಯಿಂದ ಸಂಸ್ಕೃತಿಗೆ ಭಿನ್ನವಾಗಿರುತ್ತವೆ (ಉಪಸಂಸ್ಕೃತಿಗಳು ಮತ್ತು ಸಾಮಾಜಿಕ ವರ್ಗಗಳಾದ್ಯಂತ) ಮತ್ತು ಮಕ್ಕಳು ತಮ್ಮ ಮನೆಗಳು, ನೆರೆಹೊರೆಗಳು, ಶಾಲೆಗಳು ಮತ್ತು ನೇರವಾಗಿ ಅಥವಾ ಪರೋಕ್ಷವಾಗಿ ಪರಿಣಾಮ ಬೀರುವ ಎಲ್ಲಾ ಇತರ ಸಂದರ್ಭಗಳಲ್ಲಿ ಹೊಂದಿರುವ ಅನುಭವಗಳ ಮೇಲೆ ಹೆಚ್ಚು ಪ್ರಭಾವ ಬೀರಬಹುದು. ಒಂದು ಉದಾಹರಣೆಯನ್ನು ಹೇಳುವುದಾದರೆ, ಮಕ್ಕಳ ದೈಹಿಕ ಶಿಕ್ಷೆಯನ್ನು ವಿರೋಧಿಸುವ ಮತ್ತು ಅಂತರ್‌ವೈಯಕ್ತಿಕ ಸಂಘರ್ಷವನ್ನು ಪರಿಹರಿಸುವ ಅಹಿಂಸಾತ್ಮಕ ಮಾರ್ಗಗಳನ್ನು ಪ್ರತಿಪಾದಿಸುವ ಸಂಸ್ಕೃತಿಗಳಲ್ಲಿನ (ಅಥವಾ ಬೃಹತ್‌ವ್ಯವಸ್ಥೆ) ಕುಟುಂಬಗಳಲ್ಲಿ (ಅಥವಾ ಮ್ಯಾಕ್ರೋಸಿಸ್ಟಮ್ಸ್) ಮಕ್ಕಳ ದುರುಪಯೋಗದ ಪ್ರಮಾಣವು (ಒಂದು ಸೂಕ್ಷ್ಮವ್ಯವಸ್ಥೆಯ ಅನುಭವ) ಅತ್ಯಂತ ಕಡಿಮೆ (ಬೆಲ್ಸ್ಕಿ, ೧೯೯೩; ಯುಎಸ್ ಡಿಪಾರ್ಟ್‌ಮೆಂಟ್ ಆಫ್ ಸ್ಟೇಟ್, ೨೦೦೨).

***ಟೈಮ್ (ಸಮಯ)***: ಪಿ.ಪಿ.ಟಿ.ಸಿ ಮಾದರಿಯ ಅಂತಿಮ ಅಂಶವೆಂದರೆ ಸಮಯ. ಮಾನವ ಅಭಿವೃದ್ಧಿಯ ಯಾವುದೇ ಸಿದ್ಧಾಂತಕ್ಕೆ ಸರಿಹೊಂದುವಂತೆ, ಸಿದ್ಧಾಂತದಲ್ಲಿ ಸಮಯವು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಅದೇ ರೀತಿಯಲ್ಲಿ ಸಂದರ್ಭ ಮತ್ತು ವೈಯಕ್ತಿಕ ಅಂಶಗಳೆರಡನ್ನೂ ಉಪ-ಅಂಶಗಳಾಗಿ ವಿಂಗಡಿಸಲಾಗಿದೆ, ಬ್ರೋನ್‌ಫೆನ್‌ಬ್ರೆನ್ನರ್ ಮತ್ತು ಮೊರಿಸ್ (೧೯೯೮) ಸಮಯವು ಸೂಕ್ಷ್ಮವ್ಯವಸ್ಥೆ (ಕೆಲವು ನಿರ್ದಿಷ್ಟ ಚಟುವಟಿಕೆ ಅಥವಾ ಪರಸ್ಪರ ಕ್ರಿಯೆಯ ಸಂದರ್ಭದಲ್ಲಿ ಘಟಿಸುವಂತಹ) ಮಾಧ್ಯಮಿಕವ್ಯವಸ್ಥೆ (ಸುತ್ತುವರಿದ ವ್ಯಕ್ತಿಯ ಪರಿಸರದಲ್ಲಿ ಕೆಲವು ಸ್ಥಿರತೆಯೊಂದಿಗೆ ಚಟುವಟಿಕೆಗಳು ಮತ್ತು ಅಂತರಕ್ರಿಯೆಗಳು ಘಟಿಸುವ ಪ್ರಮಾಣ) ಮತ್ತು ಬೃಹತ್‌ವ್ಯವಸ್ಥೆಯನ್ನು (ಬ್ರೊನ್ಫೆನ್‌ಬ್ರೆನ್ನರ್ ಹಿಂದೆ ಬಳಸಿದ ಕಾಲವ್ಯವಸ್ಥೆ ಎಂಬ ಪದ) ಒಳಗೊಂಡಿದೆ ಎಂದು ಬರೆದಿದ್ದಾರೆ. ನಂತರದ ಪದವು ಅಭಿವೃದ್ಧಿಶೀಲ ವ್ಯಕ್ತಿಗಳ ಒಂದು ಅಥವಾ ಮತ್ತೊಂದು ವಯಸ್ಸಿನಲ್ಲಿ ಸಂಭವಿಸಿದ ಹಿಂದಿನ ನಿರ್ದಿಷ್ ಘಟನೆಗಳ ಪ್ರಕಾರ ಬೆಳವಣಿಗೆಯ ಪ್ರಕ್ರಿಯೆಗಳು ಬದಲಾಗಬಹುದು ಎಂಬ ಅಂಶವನ್ನು ಸೂಚಿಸುತ್ತದೆ. ಈ ನಂತರದ ಅರ್ಥವನ್ನು ಎಲ್ಡರ್ (೧೯೭೪, ೧೯೯೬) ಅವರ ಸಂಶೋಧನೆಯಂಥವುಗಳಲ್ಲಿ ಉತ್ತಮವಾಗಿ ಗ್ರಹಿಸಲಾಗಿದೆ, ಅವರು ಒಂದೇ ಭೌಗೋಳಿಕ ಪ್ರದೇಶದಲ್ಲಿ ಆದರೆ ಕೇವಲ ೧೦ ವರ್ಷಗಳ ಅಂತರದಲ್ಲಿ ಜನಿಸಿದ ಎರಡು ಸಮೂಹಗಳ ಜನರ ಅಭಿವೃದ್ಧಿಯ ಪಥಗಳಲ್ಲಿನಶ ಗಮನಾರ್ಹ ಬದಲಾವಣೆಯನ್ನು ವ್ಯಕ್ತಪಡಿಸಲು ಶಕ್ತರಾಗಿದ್ದರು. ಪ್ರತಿಯೊಂದು ಸಮೂಹವು ಯುನೈಟೆಡ್ ಸ್ಟೇಟ್ಸ್‌ನಲ್ಲಿನ ಮಹಾ ಕುಸಿತದ ಪರಿಣಾಮಗಳನ್ನು (ಮತ್ತು ನಂತರದ ಐತಿಹಾಸಿಕ ಘಟನೆಗಳನ್ನು) ಸಂಪೂರ್ಣ ವಿಭಿನ್ನವಾಗಿ ಅನುಭವಿಸಿದೆ. ಏಕೆಂದರೆ ಅವರು ಈ ಪ್ರತಿಯೊಂದು ಘಟನೆಗಳನ್ನು ಜೀವನ ಪಥದ ವಿಭಿನ್ನ ಹಂತದಲ್ಲಿ ಅನುಭವಿಸಿದ್ದಾರೆ. ಕಾಲ ಮತ್ತು ಕಾಲವ್ಯವಸ್ಥೆಯು ಸಮಾನ ಪ್ರಾಮುಖ್ಯತೆಯನ್ನು ಹೊಂದಿದೆ. ಏಕೆಂದರೆ ಪಿ.ಪಿ.ಸಿ.ಟಿ ಮಾದರಿಯ ಎಲ್ಲಾ ಅಂಶಗಳನ್ನು ಸಾಪೇಕ್ಷ ಸ್ಥಿರತೆ ಮತ್ತು ಬದಲಾವಣೆಯ ನಿಟ್ಟಿನಲ್ಲಿ ಆಲೋಚಿಸಬಹುದು. ವಿಕಸನಗೊಳ್ಳುತ್ತಿರುವ ವ್ಯಕ್ತಿಯ ಕುರಿತ ಆಲೋಚನೆಯಲ್ಲಾಗಲಿ, ಅವರು ತೊಡಗಿಸಿಕೊಂಡ ಚಟುವಟಿಕೆ, ಅಂತರಕ್ರಿಯೆಗಳ ರೀತಿಗಳಲ್ಲಾಗಲಿ, ಅಥವಾ ಅವರಿರುವ ವಿವಿಧ ಸೂಕ್ಷ್ಮವ್ಯವಸ್ಥೆಗಳಲ್ಲಾಗಲಿ ಇದು ನಿಜವೆನಿಸಿದೆ. ಇದಲ್ಲದೆ, ಸಂಸ್ಕೃತಿಗಳು ಸಹ ನಿರಂತರವಾಗಿ ಬದಲಾವಣೆಗೆ ಒಳಗಾಗುತ್ತಿವೆ, ಆದಾಗ್ಯೂ ಐತಿಹಾಸಿಕ ಸಮಯದ ಕೆಲವು ಅವಧಿಗಳಲ್ಲಿ ಬದಲಾವಣೆಯ ಪ್ರಮಾಣಗಳು ಇತರ ಸಮಯಕ್ಕಿಂತ ಹೆಚ್ಚು ವೇಗವಾಗಿರುತ್ತವೆ.

### ಪಾರಿಸರಿಕ ವ್ಯವಸ್ಥೆಗಳ ಸಿದ್ಧಾಂತದ ಕೊಡುಗೆಗಳು ಮತ್ತು ಟೀಕೆಗಳು

ಈ ಸಿದ್ಧಾಂತವು ಪರಿಸರದ (ಮತ್ತು ಪರಿಸರದ ಪ್ರಭಾವಗಳ) ಸಮೃದ್ಧ ವಿವರಣೆಯನ್ನು ಒದಗಿಸುತ್ತದೆ. ನಮ್ಮಲ್ಲಿ ಪ್ರತಿಯೊಬ್ಬರೂ ನಿರ್ದಿಷ್ಟ ಸೂಕ್ಷ್ಮವ್ಯವಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಾರೆ, ಅವು ಮಾಧ್ಯಮಿಕವ್ಯವಸ್ಥೆಯೊಂದರಿಂದ ಸಂಪರ್ಕಿಸಲ್ಪಟ್ಟಿವೆ ಮತ್ತು ಬಾಹ್ಯ ಹಾಗೂ ಬೃಹತ್‌ವ್ಯವಸ್ಥೆಯೊಂದರ ಬೃಹತ್ ಸಂದರ್ಭಗಳಲ್ಲಿ ಹುದುಗಿವೆ. ಪರಿಸರ ಸಿದ್ಧಾಂತವಾದಿಗಳು, ಅವಾಸ್ತವಿಕ

ಪ್ರಯೋಗಾಲಯದ ಪರಿಸ್ಥಿತಿಗಳಲ್ಲಿ ಪರಿಸರದ ಪ್ರಭಾವಗಳನ್ನು ಅಧ್ಯಯನ ಮಾಡುವುದರಲ್ಲಿ ಅರ್ಥವಿಲ್ಲ. ಬದಲಾಗಿ, ಅಭಿವೃದ್ಧಿಶೀಲ ವ್ಯಕ್ತಿಗಳು ಮತ್ತು ಅವರ ನಿರಂತರ ಬದಲಾಗುತ್ತಿರುವ ಸ್ವಾಭಾವಿಕ ನಿಲುವುಗಳ ನಡುವಿನ ನಡವಳಿಗಳನ್ನು ಗಮನಿಸುವುದರ ಮೂಲಕ ಮಾತ್ರ ವ್ಯಕ್ತಿಗಳು ಹೇಗೆ ಪ್ರಭಾವ ಬೀರುತ್ತಾರೆ ಮತ್ತು ಅವರ ಪರಿಸರದಿಂದ ಪ್ರಭಾವಿತರಾಗುತ್ತಾರೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ ಎಂದು ಅವರು ವಾದಿಸುತ್ತಾರೆ. ಬ್ರೊನ್ಫೆನ್‌ಬ್ರೆನ್ನರ್ ಅವರ ಪರಿಸರದ ಪ್ರಭಾವಗಳ ವಿವರವಾದ ವಿಶ್ಲೇಷಣೆಗಳು ಮಕ್ಕಳು ಮತ್ತು ಹದಿಹರೆಯದವರ ಬೆಳವಣಿಗೆಯನ್ನು ಅತ್ಯುತ್ತಮವಾಗಿಸುವ ಹಲವು ಮಾರ್ಗಗಳನ್ನು ಸೂಚಿಸಿವೆ. ಉದಾಹರಣೆಗೆ, ಉದ್ಯೋಗಸ್ಥ ತಾಯಿಯು ಕಷ್ಟಕರ ಜಾಯಮಾನ ಉಳ್ಳ ತನ್ನ ಮಗುವಿನೊಂದಿಗೆ ಆಹ್ಲಾದಕರ ಸಂಬಂಧವನ್ನು ಸ್ಥಾಪಿಸಲು ಹೆಣಗುತ್ತಿದ್ದಾಳೆಂದು ಊಹಿಸಿ. ಸೂಕ್ಷ್ಮವ್ಯವಸ್ಥೆಯ ಹಂತದಲ್ಲಿ ಯಶಸ್ವಿ ಮಧ್ಯಸ್ಥಿಕೆಯು ತಂದೆ ಹೆಚ್ಚು ಸಂವೇದನಾಶೀಲ ಒಡನಾಡಿಯಾಗಲು ಸಹಾಯ ಮಾಡುತ್ತದೆ – ಆತನು ಮಗುವಿನ ಆರೈಕೆಯ ಕೆಲವು ಕಷ್ಟಗಳನ್ನು ಊಹಿಸುತ್ತಾನಲ್ಲದೆ, ತಾಯಿಯು ತಮ್ಮ ಮಗುವಿನೊಂದಿಗೆ ಹೆಚ್ಚು ಸಂವೇದನಾಶೀಲತೆ ಮತ್ತು ತಾಳ್ಮೆಯಿಂದ ವ್ಯವಹರಿಸಲು ಪ್ರೋತ್ಸಾಹಿಸುವನು (ಕೋವನ್, ಪೊವೆಲ್ ಮತ್ತು ಕೋವನ್, ೧೯೯೮). ಬಾಹ್ಯವ್ಯವಸ್ಥೆಯ ಹಂತದಲ್ಲಿ, ಸಮುದಾಯವು ವಯಸ್ಕ ಶಿಕ್ಷಣ ಪಠ್ಯಕ್ರಮದಲ್ಲಿ ಪಾಲನೆ-ಪೋಷಣೆಯ ತರಗತಿಗಳನ್ನು ಹೊಂದಿದ್ದರೆ, ತಾಯಂದಿರಿಗೆ (ಮತ್ತು ತಂದೆ) ತಮ್ಮ ಮಕ್ಕಳೊಂದಿಗೆ ತಮ್ಮ ಸಂಬಂಧಗಳನ್ನು ಸುಧಾರಿಸಲು ಆಗಾಗ್ಗೆ ಸಹಾಯ ಮಾಡಬಹುದು, ಅಥವಾ, ಪರ್ಯಾಯವಾಗಿ, ಸಮಸ್ಯೆಗಳಿರುವ ಪೋಷಕರು ತಮ್ಮ ಕಳವಳಗಳನ್ನು ವ್ಯಕ್ತಪಡಿಸಬಹುದಾದ ಪಾಲನೆ-ಪೋಷಣೆಯ ಗುಂಪುಗಳು ಅಸ್ತಿತ್ವದಲ್ಲಿದ್ದಲ್ಲಿ, ಒಬ್ಬರಿಗೊಬ್ಬರು ಭಾವನಾತ್ಮಕ ಬೆಂಬಲವನ್ನು ಪಡೆದುಕೊಳ್ಳಬಹುದು ಮತ್ತು ಅವರ ಮಕ್ಕಳಿಂದ ಹೆಚ್ಚು ಅನುಕೂಲಕರ ಪ್ರತಿಕ್ರಿಯೆಗಳನ್ನು ಹೇಗೆ ಪಡೆಯುವುದು ಎಂಬುದನ್ನು ಪರಸ್ಪರ ಕಲಿಯಬಹುದು (ಲಿಯಾನ್ಸ್-ರುತ್ ಮತ್ತು ಇತರರು, ೧೯೯೦). ಮತ್ತು ಬೃಹತ್‌ವ್ಯವಸ್ಥೆಯ ಹಂತದಲ್ಲಿ, ಕುಟುಂಬದ ವಿಷಯಗಳಿಗೆ ಹಾಜರಾಗಲು ಪೋಷಕರಿಗೆ ತಮ್ಮ ಉದ್ಯೋಗದಿಂದ, ವೇತನಸಹಿತ ಅಥವಾ ವೇತನರಹಿತ ರಜೆ ತೆಗೆದುಕೊಳ್ಳುವ ಹಕ್ಕನ್ನು ಖಾತರಿಪಡಿಸುವ ಸಾಮಾಜಿಕ ನೀತಿಯು ವಿಶೇಷವಾಗಿ ಪ್ರಮುಖ ಹಸ್ತಕ್ಷೇಪವಾಗಿದೆ - ಕೆಲಸ ಮಾಡುವ ಪೋಷಕರಿಗೆ ತಮ್ಮ ಮಕ್ಕಳೊಂದಿಗೆ ಉದ್ಭವಿಸಬಹುದಾದ ಯಾವುದೇ ತೊಂದರೆಗಳನ್ನು ಪರಿಹರಿಸಲು ಹೆಚ್ಚಿನ ಸಮಯವನ್ನು ನೀಡುವುದು ಮಾತ್ರವಲ್ಲದೆ (ಕ್ಲರ್ಕ್ ಮತ್ತು ಇತರರು, ೧೯೯೭) ಸಮಾಜವು ಮಕ್ಕಳ (ಮತ್ತು ಅಂತಿಮವಾಗಿ, ಸಮಾಜದ) ಯೋಗಕ್ಷೇಮಕ್ಕೆ (ಬ್ರೊನ್‌ಫೆನ್‌ಬ್ರೆನ್ನರ್ ಮತ್ತು ನೆವಿಲ್ಲೆ, ೧೯೯೪) ಕುಟುಂಬದ ಸಮಸ್ಯೆಗಳ ಪರಿಹಾರವು ಮುಖ್ಯವೆಂದು ಪರಿಗಣಿಸುತ್ತದೆ ಎಂಬ ಮನೋಭಾವವನ್ನು ತಿಳಿಸುತ್ತದೆ. ಆದರೂ, ಅದರ ಸಾಮರ್ಥ್ಯಗಳ ಹೊರತಾಗಿಯೂ, ಪರಿಸರದ ವ್ಯವಸ್ಥೆಗಳ ಸಿದ್ಧಾಂತವು ಮಾನವ ಅಭಿವೃದ್ಧಿಯ ಸಂಪೂರ್ಣ ಎಣಿಕೆಯಾಗಿರುವುದಿಲ್ಲ. ಬ್ರೋನ್‌ಫೆನ್‌ಬ್ರೆನ್ನರ್ ಸಿದ್ಧಾಂತವನ್ನು ಜೈವಿಕ ಪರಿಸರ ಮಾದರಿ ಎಂದು ನಿರೂಪಿಸಿದರೂ, ಅಭಿವೃದ್ಧಿಗೆ ನಿರ್ದಿಷ್ಟ ಜೈವಿಕ ಕೊಡುಗೆಯ ಬಗ್ಗೆ ವಿವರಗಳು ಕಡಿಮೆ. ಮತ್ತು ಅಭಿವೃದ್ಧಿಶೀಲ ವ್ಯಕ್ತಿಗಳು ಪ್ರಭಾವ ಬೀರುವ ಮತ್ತು ಪ್ರಭಾವಿತರಾಗುತ್ತಿರುವ, ನೈಸರ್ಗಿಕ ಪರಿಸರದ ಸಂಕೀರ್ಣತೆಗಳನ್ನು ವಿವರಿಸಲು ಪರಿಸರ ವ್ಯವಸ್ಥೆಗಳ ದೃಷ್ಟಿಕೋನಕ್ಕೆ ಅಭಿವೃದ್ಧಿಶೀಲರು ಋಣಿಯಾಗಿದ್ದರೂ ಸಹ, ಮಕ್ಕಳು ಮತ್ತು ಹದಿಹರೆಯದವರು ಪರಿಸರದ ಮಾಹಿತಿಯನ್ನು ಹೇಗೆ ಪ್ರಕ್ರಿಯೆಗೊಳಿಸುತ್ತಾರೆ ಎಂಬುದನ್ನು ನಾವು ಇನ್ನೂ ಅರ್ಥಮಾಡಿಕೊಳ್ಳಬೇಕು ಮತ್ತು ಪರಿಸರವು ಮಾನವ ಅಭಿವೃದ್ಧಿಯ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ನಾವು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವ ಮೊದಲು ಅವರ ಅನುಭವಗಳಿಂದ ಕಲಿಯಬೇಕು. ಹೀಗಾಗಿ, ಪರಿಸರ ವ್ಯವಸ್ಥೆಗಳ ನಿಲುವು ವಿಕಾಸದ ಕ್ಷೇತ್ರಕ್ಕೆ ಒಂದು ಪ್ರಮುಖ ಸೇರ್ಪಡೆ – ಆದರೆ ಅದನ್ನು ಇತರ ವಿಕಾಸ ಸಿದ್ಧಾಂತಗಳಿಗೆ ಬದಲಿಯಾಗಿರದೆ ಒಂದು ಪೂರಕ ಎಂದು ವರ್ಣಿಸುವುದು ಉತ್ತಮ.